
# ಶ್ರೀಮಾತೆಯವರ ನೆನಪು

ಬಂಗಾಳಿ ಮೂಲ : **ಸ್ವಾಮಿ ಶಂಕರಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ರಾಮಕೃಷ್ಣ ಮಹಾಸಂಘದ ೭ನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದರು (೧೮೮೦-೧೯೬೨) ಸ್ವಾಮಿ ಬ್ರಹ್ಮಾನಂದರ ಶಿಷ್ಯರು. ಶ್ರೀಮಾತೆಯವರ ಹಾಗೂ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ಒಡನಾಟದ ಸೌಭಾಗ್ಯ ದೊರಕಿದ್ದ ಅವರು, ಗಾಢ ತಪಸ್ವೀ ಜೀವನವನ್ನು ನಡೆಸಿದ್ದರು. ಈ ಸ್ಮೃತಿಲೇಖನದಲ್ಲಿ ಪೂಜ್ಯ ಸ್ವಾಮೀಜಿಯವರು ಕೆಲವು ಅಪೂರ್ವ ಘಟನೆಗಳನ್ನು ವಿವರಿಸಿದ್ದಾರೆ.

ಅದು ೧೯೦೪ ಅಥವಾ ೧೯೦೫ ನೇ ಇಸವಿ. ಖೋಕಾ ಮಹಾರಾಜ್ (ಸ್ವಾಮಿ ಸುಬೋಧಾನಂದ), ನಾನು ಮತ್ತು ವಿಶ್ವ ರಂಜನ್ (ಸ್ವಾಮಿ ಹರಿಹರಾನಂದ) ಶ್ರೀಮಾತೆಯವರ ಊರಿಗೆ ಹೋಗಿದ್ದೆವು. ಆಗ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ನಾವು ಅಲ್ಲಿಗೆ ತಲುಪಿದ ಕೂಡಲೇ ಅವರು ಬೆಸ್ತನನ್ನು ಕರೆದು, ಕೆರೆಯಿಂದ ಮೀನು ಹಿಡಿದು ತರಲು ಹೇಳಿದರು. ಮೊದಲ ಬಾರಿಗೇ ಮಧ್ಯಮಗಾತ್ರದ ಎರಡು ಮೀನುಗಳು ಸಿಕ್ಕಿದವು. ಅವೆರಡನ್ನೂ ತಂದಿಡಲಾಯಿತು. ಆಗ ಶ್ರೀಮಾತೆ ಹೇಳಿದರು: ''ನೀವು ಬಂದಿದ್ದೀರಿ ಅಂತ ಇರಬೇಕು, ಮೊದಲ ಬಾರಿಗೇ ಬೇಕಾದಷ್ಟು ಮೀನು ಸಿಕ್ಕಿವೆ. ನೀವು ಅದೃಷ್ಟವಂತರು. ಕಾಳಿಯ[೧] ಮದುವೆಗೆ ಮುನ್ನ ಹುಡುಗಿ ನೋಡಲು ಹೋಗಿದ್ದಾಗ, ಎಷ್ಟು ಬಾರಿ ಬಲೆ ಬೀಸಿದರೂ, ಸಣ್ಣ ಸಣ್ಣ ಮೀನುಗಳಷ್ಟೇ ಸಿಕ್ಕಿದ್ದವು.'' ಶ್ರೀಮಾತೆಯವರು ಸ್ವತಃ ತಾವೇ ಅಡುಗೆ ಮಾಡಿದರು. ನಮ್ಮ ಬಳಿಯಲ್ಲೇ ಕುಳಿತು ಅದೆಷ್ಟು ಸ್ನೇಹ, ಆದರಗಳಿಂದ ನಮಗೆ ಊಟ ಮಾಡಿಸಿದರು! ಅವರ ಪ್ರೀತಿ, ಸ್ನೇಹ ಎಲ್ಲವೂ ಅದೆಷ್ಟು ಸಹಜ, ಸುಂದರವಾಗಿತ್ತು! ಬಲು ಬೇಗನೆ ಅತ್ಯಂತ ಆತ್ಮೀಯರಂತೆ, ಅಂತರಂಗದಲ್ಲಿ ಮನೆಮಾಡಿದಂತೆ.

ಬೆಳಿಗ್ಗೆ ಇನ್ನೂ ಕತ್ತಲಾಗಿದ್ದಾಗಲೇ ಎದ್ದು, ನಾನು ಮತ್ತು ಖೋಕಾ ಮಹಾರಾಜ್ ಹೊರಗೆ ಹೊರಟೆವು. ಬಯಲ ಮೂಲಕ ನಾವು ನದಿಯ ಕಡೆಗೆ ಹೋಗುತ್ತಿದ್ದೆವು. ಒಬ್ಬಾಕೆ ಹೆಂಗಸು ತಲೆಯ ಮೇಲೆ ಒಂದು ಬುಟ್ಟಿಯನ್ನು ಹೊತ್ತು ನಮ್ಮ ಎದುರಾಗಿ ಬರುತ್ತಿದ್ದುದನ್ನು ಖೋಕಾ ಮಹಾರಾಜ್ ಗಮನಿಸಿದರು. ನಮ್ಮನ್ನು ನೋಡಿದ ಕೂಡಲೇ ಆಕೆ ಇನ್ನೊಬ್ಬಳ ತಲೆಗೆ ಬುಟ್ಟಿಯನ್ನಿಟ್ಟು, ತಾನು ಹಿಂದಕ್ಕೆ ಸರಿದು ನಿಂತಳು. ನಾವು ಸ್ವಲ್ಪ ದೂರ ಹೋಗಿ ಮರೆಯಾದಾಗ, ಅವರಿಬ್ಬರೂ ಶ್ರೀಮಾತೆಯವರ ಮನೆಯ ಕಡೆಗೆ ಹೊರಟುಹೋದರು. ನಾನು ಖೋಕಾ ಮಹಾರಾಜರನ್ನು ಕೇಳಿದೆ: ''ಅವರು ಯಾರೆಂದು ನಿಮಗೆ ಗೊತ್ತಾಗಲಿಲ್ಲವೆ?'' ಅವರೆಂದರು, ''ಹ್ಞೂಂ, ಗೊತ್ತಾಯಿತು.



ಚೆನ್ನಾಗಿ ನೋಡಿದೆ. ಅವರು ನಮ್ಮ ತಾಯಿಯೇ.'' ಬೆಳಿಗ್ಗೆ ಬಹಳ ಬೇಗನೆ ಎದ್ದು, ಪಕ್ಕದ ಗ್ರಾಮದ ಸಂತೆಗೆ ಹೋಗಿ, ಅಲ್ಲಿಂದ ನಮಗೋಸ್ಕರ ಬಗೆಬಗೆಯ ತರಕಾರಿಗಳನ್ನು ಕೊಂಡುಕೊಂಡು ಬರಲು ಹೋಗಿದ್ದರು. ಹಳ್ಳಿಯಲ್ಲಿ ಇನ್ನೇನು ಲಭಿಸೀತು? ಅವರ ಬುಟ್ಟಿಯಲ್ಲಿ ಒಂದಿಷ್ಟು ನುಗ್ಗೆ, ಬಾಳೆಕಾಯಿ ಹೂವು, ಬಾಳೆಕಾಯಿ ಇದ್ದವು. ಅದನ್ನು ಕೇಳಿ ನಾನು ಮೂಕನಾದೆ. ಅಂದರೆ, ಅಲ್ಲಿ ಇನ್ನು ಹೆಚ್ಚು ದಿನ ಇರಲಾಗದು. ನಮ್ಮ ಕಾರಣದಿಂದ ಶ್ರೀಮಾತೆಯವರಿಗೆ ಕಷ್ಟವುಂಟಾಗಲು ಅವಕಾಶ

೧ ಕಾಳೀಮಾಮ — ಶ್ರೀಮಾತೆಯವರ ಮೂರನೆಯ ತಮ್ಮ, ಕಾಳೀಕುಮಾರ ಮುಖ್ಯೋಪಾಧ್ಯಾಯ. *(-ಸಂ)*

ವಾಗಕೂಡದು. ಇಡೀದಿನ ಮೂಳೆ ಮುರಿಯುವಂತೆ ಶ್ರಮ ವಹಿಸಿ ಕೆಲಸ ಮಾಡುವರು, ರಾತ್ರಿಹೊತ್ತು ಕೂಡ ಸ್ವಲ್ಪವೂ ನಿದ್ದೆ ಮಾಡಲಾಗದು. ಮೂರು ದಿನ ಅಲ್ಲಿದ್ದು, ಶ್ರೀಮಾತೆಯವರಿಂದ ಬೀಳ್ಕೊಂಡು ಆರಾಂಬಾಗಿಗೆ ಬಂದುಬಿಟ್ಟೆವು.

* * *

ಅದು ೧೯೧೨ ನೇ ಇಸವಿ. ರಾಜಾ ಮಹಾರಾಜರೊಡನೆ ನಾನು ಕಾಶಿಯ ಅದ್ವೈತ ಆಶ್ರಮದಲ್ಲಿ ತಂಗಿದ್ದೆ. ಆಗ ಶ್ರೀಮಾತೆಯವರು ಅಲ್ಲಿದ್ದರು. ಮಹಾರಾಜ್ ನನಗೆ ಹೇಳಿದರು, ''ನೋಡು, ಅಮೂಲ್ಯ. ಇಂದು ನಾವು ಚಾಪ್ ತಯಾರಿಸಿ, ಶ್ರೀಮಾತೆಯವರಿಗೆ ತಿನ್ನಿಸಬೇಕು.'' ನಾನು ಅಂಗಡಿಗೆ ಹೋಗಿ, ಬಾಳೆಕಾಯಿ, ಆಲೂಗಡ್ಡೆ ಇವನ್ನೆಲ್ಲ ಕೊಂಡುಕೊಂಡು ಬಂದೆ. ಅವನ್ನೆಲ್ಲ ಬೇಯಿಸಿ ನುಣ್ಣಗೆ 'ಸಿದ್ಧ' ಮಾಡಿದೆ. ('ಸಿದ್ಧ' ಎಂದರೆ, ಬಂಗಾಳಿಯಲ್ಲಿ ಹಿಟ್ಟಿನಂತೆ ನುಣ್ಣಗೆ ಮಾಡುವುದು; ತರಕಾರಿ ಇತ್ಯಾದಿಗಳನ್ನು ಬೇಯಿಸಿದ ಬಳಿಕ, ಅದನ್ನು ಕೈಯಿಂದ ಹಿಸುಕಿ 'ಸಿದ್ಧ' ಮಾಡುತ್ತಾರೆ.) ಒಳಭಾಗದಲ್ಲಿ ಬಾಳೆಕಾಯಿ ಹೂರಣ; ಆಲೂಗಡ್ಡೆಯನ್ನು 'ಸಿದ್ಧ' ಮಾಡುವಾಗ ನೋಡಿದೆ, ಅದು ಬಹಳ ಮೆತ್ತಗಾಗಿತ್ತು. ಆಗ ಇನ್ನೊಂದು ವಸ್ತುವನ್ನು ಅದಕ್ಕೆ ಸೇರಿಸಿ, ತುಸು ಗಟ್ಟಿಯಾಗುವಂತೆ ಮಾಡಿದೆ. ಚಾಪ್ ತಯಾರಿಸಿ, ಅವನ್ನು ಒಂದು ತಟ್ಟೆಯಲ್ಲಿ ಓರಣವಾಗಿ ಜೋಡಿಸಿ, ನೈವೇದ್ಯ ಮಾಡಲು ದೇವಾಲಯಕ್ಕೆ ತೆಗೆದುಕೊಂಡು ಹೋಗುವಷ್ಟರಲ್ಲಿ ಶ್ರೀಮಾತೆಯವರು ಪೂಜೆ ಮುಗಿಸಿದ್ದರು. ಉಳಿದ ನೈವೇದ್ಯಗಳೊಂದಿಗೆ ಶ್ರೀಮಾತೆ ಚಾಪ್ ಅನ್ನು ಕೂಡ ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿದರು. ಉಳಿದ ಪ್ರಸಾದಗಳೊಂದಿಗೆ ಶ್ರೀಮಾತೆ ಚಾಪ್ ಪ್ರಸಾದವನ್ನೂ ಸೇವಿಸಿದರು. ಎಲ್ಲವೂ ಚೆನ್ನಾಗಿ ನಡೆಯಿತು. ಎಲ್ಲವನ್ನೂ ಒಳ್ಳೆಯ ಭಾವದಿಂದ ಸ್ವೀಕರಿಸುವುದು ಶ್ರೀಮಾತೆಯವರ ಸ್ವಭಾವ. ಗೋಲಾಪ್-ಮಾ ಕೂಡ ಅದನ್ನು ತಿಂದರು. ಒಳ್ಳೆಯ ರುಚಿಕರವಾದ ಚಾಪ್ ಅನ್ನು ತಿಂದು ಅವರು ಹೊಗಳತೊಡಗಿದರು. ''ಹಾಂ, ಅಮೂಲ್ಯ; ಇಷ್ಟು ರುಚಿಕರವಾದ ಚಾಪ್ ಹೇಗೆ ತಯಾರಿಸಿದೆ? ಎಷ್ಟೊಂದು ಗರಿಗರಿಯಾಗಿದೆ, ಸ್ವಾದಿಷ್ಟವಾಗಿದೆ!'' ಎಂದರು. ಆಗ ಮಹಾರಾಜ್ ಕೂಡ ವರಾಂಡದಲ್ಲಿ ನಿಂತಿದ್ದರು. ನನ್ನತ್ತ ನೋಡಿ ಕಣ್ಣು ಮಿಟುಕಿಸಿದರು. ನಾನು ಸುಮ್ಮನೆ ನಿಂತಿದ್ದೆ. ಏನೂ ಉತ್ತರ ನೀಡಲಿಲ್ಲ. ಮಹಾರಾಜ್ ಹೇಳಿದರು: ''ಗೋಲಾಪ್-ಮಾ, ನಿಮಗೆ ಮಾತ್ರವೇ ಚೆನ್ನಾಗಿ ಅಡುಗೆ ಮಾಡಲು ಬರುತ್ತದೆಂದು ನೀವು ತಿಳಿದುಕೊಂಡಿದ್ದೀರಿ. ನೋಡಿ, ನಿಮಗಿಂತ ಚೆನ್ನಾಗಿ ಅಡುಗೆ ಮಾಡಲು ನಮಗೂ ಬರುತ್ತದೆ.'' ಅನಂತರ ಮಹಾರಾಜ್ ಅದನ್ನು ತಯಾರಿಸಿದ್ದು ಹೇಗೆ ಎಂದು ನನ್ನನ್ನು ಕೇಳಿದರು. ನಾನಂದೆ, ''ಆಲೂಗಡ್ಡೆಯನ್ನು ಮೆತ್ತಗೆ 'ಸಿದ್ಧ' ಮಾಡುವಷ್ಟರಲ್ಲೇ ನಾನು ರವೆಯನ್ನು ಕರಿದು, ಅದರೊಂದಿಗೆ ಮಿಶ್ರಣ ಮಾಡಿದೆ. ಮಸಾಲೆಯನ್ನು ಕರಿದು ಹೂರಣದೊಂದಿಗೆ ಮಿಶ್ರಣ ಮಾಡಿ ಸೇರಿಸಿಬಿಟ್ಟೆ.''



ಸ್ವಾಮಿ ಶಂಕರಾನಂದರು, ರಾಮಕೃಷ್ಣ ಮಹಾಸಂಘದ ೭ನೇ ಪರಮಾಧ್ಯಕ್ಷರು

* * *

ಆಗ ಶ್ರೀಮಾತೆಯವರು 'ಉದ್ಬೋಧನ'ದಲ್ಲಿದ್ದರು. ಒಂದು ಭಾನುವಾರ ಸಂಜೆ ಸುಮಾರು ಮೂರುಗಂಟೆಯ ಹೊತ್ತಿಗೆ ಠಾಕೂರರ ಅಣ್ಣನ ಮಗಳು ಲಕ್ಷ್ಮೀ-ದೀದಿ ಮೂವರು ಭಕ್ತರೊಂದಿಗೆ ಅಲ್ಲಿಗೆ ಬಂದಳು. ಅವರೆಲ್ಲರೂ ಶ್ರೀಮಾತೆಯವರ ದರ್ಶನ ಮಾಡಿ, ಅವರಿಗೆ ಪ್ರಣಾಮ ಮಾಡಿದರು. ಶ್ರೀಮಾತೆಯವರು ಲಕ್ಷ್ಮೀದೀದಿಗೆ ಹೇಳಿದರು: ''ಯೋಗಿನ್‌ಗೆ (ಯೋಗಿನ್-ಮಾಗೆ) ತುಂಬ ಜ್ವರ ಬಂದಿದೆ. ಮಲಗಿಯೇ ಇದ್ದಾಳೆ. ಅವಳನ್ನೊಮ್ಮೆ ನೋಡಿ ಬಾ.'' ಲಕ್ಷ್ಮೀ ದೀದಿ ಯೋಗಿನ್-ಮಾಳನ್ನು ನೋಡಲು ಹೋದಳು. ಆಗ ಯೋಗಿನ್-ಮಾಗೆ ಜ್ವರ ಹೆಚ್ಚಾಗಿತ್ತು. ಯೋಗಿನ್-ಮಾಳ ಕೋಣೆಯಿಂದ ಹೊರ ಬಂದ ಲಕ್ಷ್ಮೀ-ದೀದಿ ತಮ್ಮೊಂದಿಗೆ ಬಂದವರನ್ನು ಕರೆದುಕೊಂಡು ಎಂಟಲಿಗೆ (ದೇವೇಂದ್ರನಾಥ ಮಜುಂದಾರರ ಆಶ್ರಮಕ್ಕೆ) ಹೊರಟುಹೋದಳು. ಅಲ್ಲಿ ಶ್ರೀರಾಮಕೃಷ್ಣರ ಜಯಂತಿಯ

ಉತ್ಸವ ನಡೆಯುತ್ತಿತ್ತು.

ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರು ಲಕ್ಷ್ಮೀದೀದಿ ಹೊರಟುಹೋದಳೆಂಬುದನ್ನು ಕೇಳಿ ತಿಳಿದುಕೊಂಡರು. ಲಕ್ಷ್ಮೀ ದೀದಿಗೆ ಪ್ರಸಾದ ನೀಡಲಾಗಿದೆಯೇ ಇಲ್ಲವೇ ಎಂಬುದನ್ನು ಶ್ರೀಮಾತೆ ವಿಚಾರಿಸಿದರು. ಆದರೆ ಪ್ರಸಾದ ಕೊಟ್ಟಿರುವ ಬಗೆ ಯಾರಿಗೂ ಗೊತ್ತಿರಲಿಲ್ಲ. ಇದರಿಂದ ಶ್ರೀಮಾತೆಯವರು ತುಂಬಾ ಕಳವಳಗೊಂಡರು. ಅದಕ್ಕೆ ಕಾರಣ ಬಹುಶಃ ಲಕ್ಷ್ಮೀ ದೀದಿ ಶೀತಲಾದೇವಿಯ ಅಂಶದಿಂದ ಹುಟ್ಟಿದ್ದಳು ಎಂಬುದೇ ಇರಬೇಕು. ಇದನ್ನು ಸ್ವತಃ ಶ್ರೀರಾಮಕೃಷ್ಣರೇ ತಿಳಿಸಿದ್ದರು, ಹಾಗೂ ತಮ್ಮ ಅಣ್ಣನ ಮಗಳೊಂದಿಗೆ ಅವರು ಯಾವಾಗಲೂ ತುಂಬ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದರು. ಲಕ್ಷ್ಮೀ ದೀದಿ ಕೋಪಗೊಂಡರೆ ಅದರಿಂದ ಏನಾದರೂ ಅಮಂಗಳವುಂಟಾದೀತು ಎಂಬ ಭಯದಿಂದ, ಶ್ರೀಮಾತೆ ಕೂಡಲೇ ಒಬ್ಬ ಹುಡುಗನನ್ನು ಕರೆದು, ಅವನ ಕೈಗೆ ಒಂದು ಒಳ್ಳೆಯ ಸೀರೆ, ಸಿಹಿತಿಂಡಿ ಹಾಗೂ ಎರಡು ರೂಪಾಯಿ ಇವನ್ನು ಕೊಟ್ಟರು. ಎಂಟಲಿಯಲ್ಲಿ ನಡೆಯುತ್ತಿರುವ ಜಯಂತಿ ಉತ್ಸವಕ್ಕೆ ಹೋಗಿ, ಲಕ್ಷ್ಮೀದೀದಿ ಕೈಗೆ ಅವನ್ನೆಲ್ಲ ಕೊಟ್ಟು ಹೀಗೆ ಹೇಳಲು ತಿಳಿಸಿದರು — ''ಶ್ರೀಮಾತೆ ಹೇಳುತ್ತಾರೆ, ನೀವು ಹೊರಡುವ ಮೊದಲು ಅವರನ್ನು ಭೇಟಿಯಾಗುತ್ತಿದ್ದಿರಿ ಅಂತ; ನಿಮ್ಮನ್ನು ಸರಿಯಾಗಿ ನೋಡಿಕೊಳ್ಳಲಾಗಲಿಲ್ಲ ಅಂತ ಅವರಿಗೆ ತುಂಬ ದುಃಖವಾಗಿದೆ. ಅವರು ಇವನ್ನು ನಿಮಗೆ ಕಳುಹಿಸಿಕೊಟ್ಟಿದ್ದಾರೆ.''

ಹುಡುಗ ಎಂಟಲಿ ಆಶ್ರಮಕ್ಕೆ ಹೋಗಿ ನೋಡಿದಾಗ, ಲಕ್ಷ್ಮೀ ದೀದಿಯನ್ನು ಸುತ್ತುವರಿದು ಕೆಲವು ಮಂದಿ ಹೆಂಗಸರು ಕುಳಿತಿದ್ದರು. ಅವನು ನಿಧಾನವಾಗಿ ಅವರ ನಡುವೆ ನುಸುಳಿ, ಭಕ್ತಿಪೂರ್ವಕವಾಗಿ ಲಕ್ಷ್ಮೀದೀದಿಗೆ ಪ್ರಣಾಮ ಮಾಡಿದ. ಶ್ರೀಮಾತೆ ಏನನ್ನು ಹೇಳಲು ತಿಳಿಸಿದ್ದರೋ ಅದನ್ನು ಅವನು ಹೇಳಿದ. ಲಕ್ಷ್ಮೀದೀದಿಗೆ ಎಷ್ಟು ಆನಂದವಾಯಿತೋ ಅಷ್ಟೇ ನಾಚಿಕೆಯೂ ಆಯಿತು. ಹೊರಟು ಬರುವ ಮೊದಲು ಶ್ರೀಮಾತೆಯವರಿಗೆ ತಿಳಿಸಲಿಲ್ಲ— ಎಂದು. ಅವಳೆಂದಳು, ''ನನ್ನೊಂದಿಗೆ ಇದ್ದವರು ಇಲ್ಲಿಗೆ ಬರಲು ತುಂಬ ಅವಸರ ಮಾಡುತ್ತಿದ್ದರು. ಅದರಿಂದ ಶ್ರೀಮಾತೆಯವರಿಗೆ ತಿಳಿಸಿ ಬರಲು ನನಗೆ ಮರೆತುಹೋಯಿತು. ಇರಲಿ, ಶ್ರೀಮಾತೆಯವರಿಗೆ ನನ್ನ ಭಕ್ತಿಪೂರ್ವಕ ಪ್ರಣಾಮ ತಿಳಿಸು. ಅದಲ್ಲದೆ ಇದನ್ನೂ ಹೇಳು, ನಾನು ಒಂದು ದಿನ ಶ್ರೀಮಾತೆಯವರ ಬಳಿಗೆ ಹೋಗಿ, ಇಡೀ ದಿನ ಅವರೊಂದಿಗೆ ಇರುತ್ತೇನೆ ಅಂತ.''

ಆ ಹುಡುಗ ಮರಳಿ ಬಂದು ಲಕ್ಷ್ಮೀದೀದಿ ಹೇಳಿದ್ದನ್ನೆಲ್ಲ ಶ್ರೀಮಾತೆಯವರಿಗೆ ತಿಳಿಸಿದ. ಆಗ ಶ್ರೀಮಾತೆಯವರಿಗೆ ಅತ್ಯಂತ ಸಮಾಧಾನವಾಯಿತು. ಎರಡು, ಮೂರು ದಿನಗಳ ನಂತರ ಲಕ್ಷ್ಮೀದೀದಿ ಶ್ರೀಮಾತೆಯವರ ಬಳಿಗೆ ಬಂದು, ಒಂದು ದಿನ ಪೂರ್ತಿ ಅವರೊಂದಿಗೆ ಕಳೆದಳು. ಆಗ ಶ್ರೀಮಾತೆಯವರಿಗೆ ತುಂಬಾ ಆನಂದವಾಯಿತು.[೨]

*(ಸಂಗ್ರಹ: ಸ್ವಾಮಿ ಚೇತನಾನಂದ)*

೨ ಸ್ವಾಮಿ ಈಶಾನಾನಂದರು (ವರದಾ ಮಹಾರಾಜ್) ಬರೆಯುತ್ತಾರೆ: ಶ್ರೀಮಾತೆಯವರ ಕೊನೆಯ ದಿನಗಳಲ್ಲಿ ಲಕ್ಷ್ಮೀದೀದಿಯೊಂದಿಗೆ ರಾಮಲಾಲ್ ದಾದಾ ಹಾಗೂ ಅವರ ಮಗಳು ಕೃಷ್ಣಮಯಿ ಒಂದು ದಿನ 'ಉದ್ಬೋಧನ'ಕ್ಕೆ ಹೋಗಿದ್ದರು. ಅಂದೂ ಕೂಡ ಲಕ್ಷ್ಮೀದೀದಿಗೆ ಸೀರೆ, ಹಣ ನೀಡಲು ಶ್ರೀಮಾತೆ

## ಶ್ರೀಮಾತೆಯವರ ಉಪದೇಶಗಳು



✺ ಗಂಗಾತೀರದಲ್ಲಿ ನಾಲ್ಕು ಕ್ರೋಶ (ಎಂಟು ಮೈಲಿ)ದುದ್ದಕ್ಕೂ ಪವಿತ್ರ ಗಾಳಿ ಬೀಸುತ್ತಿರುತ್ತದೆ. ಗಾಳಿಯ ರೂಪದ ನಾರಾಯಣ ಅದು! ತುಂಬಾ ತಪಸ್ಸು ಮಾಡಿದರೆ ಮಾತ್ರ ಮನಸ್ಸು ಶುದ್ಧವಾಗುವುದು. 'ಸಾಧನೆ ಮಾಡದೆ ಶುದ್ಧ ವಸ್ತುವಾದ ಭಗವಂತನ ಪ್ರಾಪ್ತಿಯಾಗದು.'

✺ ಭಗವಂತನ ಸಾಕ್ಷಾತ್ಕಾರವಾದರೆ ಇನ್ನೇನಾಗುವುದು? ಎರಡು ಕೋಡು ಬೆಳೆಯುವುದೆ? ಅವನ ಮನಸ್ಸು ಶುದ್ಧವಾಗುವುದು. ಶುದ್ಧ ಮನಸ್ಸಿನಲ್ಲಿ ಜ್ಞಾನ ಹಾಗೂ ಚೈತನ್ಯ ಜಾಗೃತವಾಗುವುದು.

✺ **ಶಿಷ್ಯ :** ಭಗವಂತನಲ್ಲೇ ಯಾರು ನಿರ್ಭರರಾಗಿರುತ್ತಾರೋ ಅವರಿಗೆ (ಸಾಧನೆಯಿಲ್ಲದೆ) ಹೇಗೆ ಇಂಥ ಅವಸ್ಥೆ ಉಂಟಾಗುವುದು?

**ಶ್ರೀಮಾತೆ :** ಭಗವಂತನಲ್ಲೇ ನಿರ್ಭರರಾಗಿರುವುದು, ಅವನಲ್ಲಿ ವಿಶ್ವಾಸ ಹೊಂದಿರುವುದು — ಇದೇ ಅವರ ಸಾಧನೆ. ಆಹಾ! ನರೇನ್ ಹೇಳುತ್ತಿದ್ದ, 'ಲಕ್ಷ ಜನ್ಮವಾದರೂ ಆಗಲಿ, ಅದರಿಂದೇನಂತೆ?' ಅಂತ. ಸರಿಯಲ್ಲವೆ? ಜ್ಞಾನಿಗಳಿಗೆ ಜನ್ಮವೆತ್ತಲು ಭಯವೇಕಂತೆ? ಅದರಿಂದ ಇನ್ನು ಪಾಪ ಮಾಡಲು ಸಾಧ್ಯವಿಲ್ಲ. ಅಜ್ಞಾನಿಗಳಿಗೆ ಮಾತ್ರ ಅಷ್ಟೊಂದು ಭಯ. ಅವರು ಬದ್ಧರಾಗುತ್ತಾರೆ, ಪಾಪದಲ್ಲಿ ಮುಳುಗಿಹೋಗುತ್ತಾರೆ. ಲಕ್ಷ ಲಕ್ಷ ಜನ್ಮಗಳಲ್ಲಿ ಕಷ್ಟ ಅನುಭವಿಸಿ ಕೊನೆಗೆ ಭಗವಂತನನ್ನು ಪಡೆಯುವ ಇಚ್ಛೆ ಅವರಿಗುಂಟಾಗುತ್ತದೆ.

✺ ಗುರುವಾದವನು ಎಷ್ಟು ಸಲವಾದರೂ ಮರಳಿ ಕಳುಹಿಸಿರಲಿ, ಯಾರಿಗೆ ನಿಜವಾಗಿಯೂ ಕೃಪೆ ಬೇಕಾಗಿದೆಯೋ ಅವರು ಭಿಕ್ಷೆ ಬೇಡಿಯಾದರೂ ಅವನ ಬಳಿಗೆ ಬರುತ್ತಾನೆ.

**'ಶ್ರೀಶಾರದಾದೇವಿ ವಚನವೇದ'** ದಿಂದ, ಪು.೨೬೪-೬೭